

# ಆಹಾರ ಸಂಸ್ಕೃತಿಯ ಮೇಲೆ ಭಾವುಕ ಪ್ರಹಾರ

■ ಗೌರಿ

**ತಾಂತ್ರಿಕವಾಗಿ ಗಟ್ಟಿಯಾಗಿರುವ ‘ಕೋಯಿ’ ಕಿರುಚಿತ್ರಕ್ಕೆ ತನ್ನ ಉದ್ದೇಶವೇ ಮಿತಿಯಾಗಿದೆ. ಆಹಾರ ಸಂಸ್ಕೃತಿಯ ಮೇಲರಿಮೆಯನ್ನು ಸಮರ್ಥಿಸಿಕೊಳ್ಳುವ ನಿರ್ದೇಶಕರ ಗುಪ್ತ ಇಂಗಿತ ಇಲ್ಲಿ ವಾಚ್ಯವಾಗಿಯೇ ಪ್ರಕಟಗೊಂಡಿದೆ.**

ಕಿರಿಯದೊಂದು ಎಳೆಯನ್ನು ಹಿಡಿದುಕೊಂಡು ಹಿರಿದಾದ ಬದುಕಿಗೆ ಆಳದ ಸತ್ಯಗಳನ್ನು ಶೋಧಿಸುವ ಪ್ರಯತ್ನವನ್ನು ಇತ್ತೀಚೆಗಿನ ಮಲಯಾಳಂ ಸಿನಿಮಾಗಳು ಮಾಡಿದಷ್ಟು ಶಕ್ತವಾಗಿ ಭಾರತದ ಬೇರೆ ಯಾವ ಭಾಷೆಯ ಸಿನಿಮಾಗಳೂ ಮಾಡಿಲ್ಲವೆಂದೇ ಹೇಳಬಹುದು. ಆ ನೆಲದಿಂದ ಬೇರ್ಪಡಿಸಲಾಗದ ಹಾಗೆ ಹೆಣೆದುಕೊಂಡ ಕಥೆಗಳನ್ನೇ ಅವರು ಚಿತ್ರವಾಗಿಸುತ್ತಾರೆ. ಹಾಗಾಗಿ ಸೂಕ್ಷ್ಮ ವಿವರಗಳ ಮೂಲಕವೇ ಅವು ಬದುಕನ್ನು ಕಾಣಿಸುತ್ತವೆ.

ಲಿತಿನ್ ಲೋಹಿತಾಕ್ಷನ್ ನಾಯರ್ ನಿರ್ದೇಶನದ ‘ಕೋಯಿ’ ಎಂಬ ಕಿರುಚಿತ್ರ ಕೂಡ ಇಂಥ ಪ್ರಾದೇಶಿಕ ವಿವರಗಳ ಮೂಲಕವೇ ಗಮನಸೆಳೆಯುತ್ತದೆ. ಗಂಡ, ಹೆಂಡತಿ, ಮಗು ಇರುವ ಸಂಸಾರದಲ್ಲಿ ಈ ಕಿರುಚಿತ್ರ ಘಟಿಸುತ್ತದೆ. ಆದರೆ ಕಥೆಯ ಜೊತೆಗೆ ಅಲ್ಲಿನ ಪರಿಸರವನ್ನು ಕಟ್ಟಿಕೊಡುವ, ಕಥನದ ಚೌಕಟ್ಟಿನೊಳಗೇ ಜನಜೀವನದ ವಿವರಗಳನ್ನು ಕಾಣಿಸಿಕೊಡುವ ಪ್ರಯತ್ನವನ್ನು ನಿರ್ದೇಶಕರು ಮಾಡಿದ್ದಾರೆ.

ವಿವರಗಳಿಂದಷ್ಟೇ ಯಾವುದೇ ಕಲಾಕೃತಿ ಯಶಸ್ವಿ ಆಗುವುದಿಲ್ಲವಷ್ಟೆ. ಕೊನೆಗೂ ವಿವರಗಳ ಮೂಲಕ ಒಟ್ಟಾರೆ ಕೃತಿ ಏನನ್ನು ಹೇಳಲು ಹೊರಟಿದೆ? ಅದು ಸಹೃದಯನ ಮನಸಲ್ಲಿ ಯಾವ ರೀತಿ ಪರಿಣಾಮವನ್ನು ಬೀರುವ ಪ್ರಯತ್ನ ಮಾಡುತ್ತಿದೆ ಎಂಬುದೇ ಮುಖ್ಯವಲ್ಲವೇ? ಈ ದೃಷ್ಟಿಯಿಂದ ನೋಡಿದರೆ ‘ಕೊಯಿ’ ಕಿರುಚಿತ್ರ ನಿರಾಸೆ ಹುಟ್ಟಿಸುವುದಷ್ಟೇ ಅಲ್ಲ, ಒಂದು ಅಜೆಂಡಾದ ಸಲಕರಣೆಯಾಗಿ ಕಾಣುತ್ತದೆ.

ಪ್ರಾಣಿಹಿಂಸೆ ನ್ಯಾಯವೇ? ಮಾಂಸಾಹಾರ ಅನಾಗರಿಕತೆಯ ಸಂಕೇತ ಎಂಬಿತ್ಯಾದಿ ವಾದಗಳು ಹಿಂದಿನಿಂದಲೂ ಇದ್ದಿದ್ದೇ. ಜಾತಿಪದ್ಧತಿಯ ಹಾಗೆಯೇ ಆಹಾರ ಸಂಸ್ಕೃತಿಯಲ್ಲಿಯೂ ಸಸ್ಯಾಹಾರ ಮೇಲು, ಮಾಂಸಾಹಾರ ಕೀಳು ಎಂಬ ಮನಸ್ಥಿತಿ ಸಮಾಜದಲ್ಲಿ ಬಲವಾಗಿಯೇ ಬೇರೂರಿದೆ. ಇದರ ಹಿಂದೆ ತುಂಬ ಸ್ಪಷ್ಟವೂ ಬಲವೂ ಆದ ರಾಜಕಾರಣವೂ ಇದೆ. ಈ ಕಿರುಚಿತ್ರದ ಹಿಂದೆ, ಆ ರಾಜಕಾರಣದ ಒಂದು ಬದಿಯನ್ನು ಪ್ರತಿಪಾದಿಸುವ ಉದ್ದೇಶವಿರುವುದು ಸ್ಪಷ್ಟವಾಗಿಯೇ ಕಾಣುತ್ತದೆ.

**ಹೆಸರು:** ಕೋಯಿ (ಮಲಯಾಳಂ)
**ನಿರ್ದೇಶನ:** ಲಿತಿನ್ ಲೋಹಿತಾಕ್ಷನ್ ನಾಯರ್
**ನಿರ್ಮಾಣ:** ದೀಪೇಶ್ ಕುನ್ನಮ್ಮಲ್
**ಛಾಯಾಗ್ರಹಣ:** ದೇವನ್ ಮೋಹನ್
**ಸಂಗೀತ:** ಪ್ರಿನ್ಸ್ ಜೂಲಿಯಸ್
**ಸಂಕಲನ:** ಅರ್ಜುನ್ ಭಾಸ್ಕರನ್
**ತಾರಾಗಣ:** ದೀಪೇಶ್ ನರಿಕ್ಕುಣಿ, ದೇವತಿಲಕ್, ಪ್ರಸಿದಾ ವಸು, ಅತುಲ್ ರಾಜ್

ಸಾಮಾನ್ಯವಾಗಿ ಮೇಲ್ವರ್ಗದವರು ‘ತುಚ್ಛ’ ಎಂದು ಗಣಿಸಿರುವ ಸಂಸ್ಕೃತಿಗಳ ಮೇಲೆ ಆಗುವ ದಾಳಿಗಳು ಎರಡು ರೀತಿಗಳಲ್ಲಿ ನಡೆಯುತ್ತವೆ. ವಾಸ್ತವ ಬದುಕಿನಲ್ಲಿ ಅದು ಹಿಂಸೆಯ ಮೂಲಕ ನಡೆದರೆ, ಕಲಾಮಾಧ್ಯಮದಲ್ಲಿ ಭಾವುಕತೆಯ ಅಸ್ತ್ರದ ಮೂಲಕ ನಡೆಸಲಾಗುತ್ತದೆ. ಈ ಕಿರುಚಿತ್ರದ ಕೇಂದ್ರದಲ್ಲಿ ಒಂದು ಮಗುವಿರುವುದು ಆಕಸ್ಮಿಕವೇನಲ್ಲ. ಜನರನ್ನು ಥಟ್ಟನೆ ಭಾವುಕಗೊಳಿಸುವುದು ಮಕ್ಕಳ ನೋವು.

ಜೀತುಗೆ ಅವನ ಮನೆಯಲ್ಲಿರುವ ಕೋಳಿ ಎಂದರೆ ಪ್ರಾಣ. ಅವನ ತಂದೆಯೋ ಜಗತ್ತಿನಲ್ಲಿರುವ ಪ್ರಾಣಿಗಳೆಲ್ಲವೂ ಮನುಷ್ಯನು ಕೊಂದು ತಿನ್ನಲಿಕ್ಕಾಗಿಯೇ ಇರುವಂಥವು ಎಂಬುವವನು. ಮನೆಗೆ ಯಾರೋ ಅತಿಥಿಗಳು ಬರುವಾಗ ಜೀತುವಿನ ಕೋಳಿಯನ್ನು ಕೊಂದು ಖಾದ್ಯ ಮಾಡಲು ನಿರ್ಧರಿಸುತ್ತಾನೆ. ಕೊನೆಗೆ ಕೋಳಿಯ ಕತ್ತಿಗೆ ಕತ್ತಿ ಹಿಡಿದವನ ಮನಸಲ್ಲಿ ಮೊಲ, ಕುರಿ, ದನ ಹೀಗೆ ಬೇರೆ ಬೇರೆ ಪ್ರಾಣಿಗಳ ದಯನೀಯ ಮುಖ ಮೂಡಿ ಮನಃಪರಿವರ್ತನೆಯಾಗಿ ಕೋಳಿ ಕೊಲ್ಲುವ ನಿರ್ಧಾರ ಕೈಬಿಡುತ್ತಾನೆ.

ಇದು ಕಿರುಚಿತ್ರದ ಕಥೆಯ ಎಳೆ. ನಿರ್ದೇಶಕರು ತುಂಬ ಜಾಣತನದಿಂದ ಈ ಘಟನೆಯನ್ನು ನೋಡುವ ಕಣ್ಣುಗಳಿಗೆ ಜೀತುವಿನ ಭಾವುಕತೆಯ ಮಂಕುಬೂದಿಯನ್ನು ಎರಚಿಬಿಡುತ್ತಾರೆ. ಕೊನೆಗೆ ಕೋಳಿಯನ್ನು ಕೊಯ್ಯುವ ನಿರ್ಧಾರ ಬಿಟ್ಟಿದ್ದರಿಂದ ಎಲ್ಲರೂ ಸಂತೋಷಗೊಂಡರು ಎಂದು ಬಿಂಬಿಸುತ್ತಾರೆ. ಇದು ಆ ಕ್ಷಣಕ್ಕೆ ನಿರಾಳಭಾವ ಹುಟ್ಟಿಸುತ್ತದಾದರೂ, ಕಿರುಚಿತ್ರ ವ್ಯಕ್ತಪಡಿಸುತ್ತಿರುವ ಧ್ವನಿ ಆತಂಕ ಹುಟ್ಟಿಸುವಂಥದ್ದು. ಹಿಂಸೆ ಎನ್ನುವುದನ್ನು ವ್ಯಕ್ತಿಯ ಆಹಾರಸಂಸ್ಕೃತಿಗೆ ಜೋಡಿಸಿ ಬಿಂಬಿಸುವುದೇ ತಪ್ಪುಗ್ರಹಿಕೆಗೆ ಅನುವು ಮಾಡಿಕೊಡುವಂಥದ್ದು. ಪ್ರತಿಯೊಂದು ಸಮುದಾಯದ ಆಹಾರ ಸಂಸ್ಕೃತಿಯ ಹಿಂದೂ ಒಂದು ಪರಂಪರೆ ಇದೆ. ಅದು ಮೇಲ್ವರ್ಗದವರ, ಸಸ್ಯಾಹಾರಿಗಳ ಪರಂಪರೆಯಷ್ಟೇ ಗಟ್ಟಿಯಾಗಿ ಈ ನೆಲದಲ್ಲಿ ಬೇರೂರಿರುವಂಥದ್ದು. ಅದನ್ನು ಭಾವುಕತೆಯ ನೆಲೆಗಟ್ಟಿನಲ್ಲಿ ತುಚ್ಛವಾಗಿ ಬಿಂಬಿಸುವುದು ಕಲೆಗಷ್ಟೇ ಅಲ್ಲ, ಬದುಕಿಗೂ ಮಾಡಿದ ಅವಮಾನವಾಗುತ್ತದಷ್ಟೆ.

ಕೇರಳದಂಥ ಬಹುಸಂಸ್ಕೃತಿಯ ನೆಲದಲ್ಲಿ ಈ ಕಿರುಚಿತ್ರ ನಿರ್ಮಾಣವಾಗಿದೆ ಎಂಬುದು ಅಲ್ಲಿನ ರಾಜಕೀಯ, ಸಾಂಸ್ಕೃತಿಕ ಸ್ಥಿತ್ಯಂತರವನ್ನೂ ಸೂಕ್ಷ್ಮವಾಗಿ ಹೇಳುವಂತಿದೆ.

ಈ ಕಿರುಚಿತ್ರ ವೀಕ್ಷಣೆಗೆ bit.ly/3lb1Onz ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.